ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 40 ಭೂಸ್ವಾಸ್ವಾ 2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:26-06-2013

# ಸುತ್ತೋಲೆ

ವಿಷಯ:- ಕಾವೇರಿ ನೀರಾವರಿ ನಿಗಮದ ಪರವಾಗಿ ಕೈಗೊಳ್ಳಲಾಗುತ್ತಿರುವ ಭೂಸ್ವಾಧೀನ ಪ್ರಕರಣಗಳನ್ನು, ಆರಂಭಿಕ ಠೇವಣಿ ಇಲ್ಲದೇ ಪ್ರಾರಂಭಿಸಲು ನೀಡಿರುವ ವಿನಾಯಿತಿಯನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:-
1) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 108 ಭೂಸ್ವಾಸ್ವಾ 2000, ದಿ:09-01-2002
2) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 8 ಎಕ್ಯೂಡಬ್ಲ್ಯೂ 2005, ದಿ:10-05-2005
3) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 8 ಎಕ್ಯೂಡಬ್ಲ್ಯೂ 2006, ದಿ:19-04-2006
4) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 135 ಎಕ್ಯೂಡಬ್ಲ್ಯೂ 2006 ದಿ:28-08-2007
5) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 30 ಎಕ್ಯೂಡಬ್ಲ್ಯೂ 2008 ದಿ:16-05-2008
6) ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 71 ಎಕ್ಯೂಡಬ್ಲ್ಯೂ 2010 ದಿ:30-04-2010
7) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 71 ಎಕ್ಯೂಡಬ್ಲ್ಯೂ 2010 ದಿ:09-09-2010
8) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 76 ಎಕ್ಯೂಡಬ್ಲ್ಯೂ 2011 ದಿ:19-05-2011
9) ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 29 ಭೂಸ್ವಾಸ್ವಾ 2012 ದಿ:28-04-2012
10) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಮೈಸೂರು ಇವರ ಪತ್ರ ಸಂಖ್ಯೆ:ಕಾನೀನಿ/ಅ/ಸಿ-3(1)/ಭೂಸ್ವಾ/ಆರಂಭಿಕ ಠೇವಣಿ/ಸಿ.ಆರ್.01/12-13, ದಿ:17-01-2013

*****

ಭೂಸ್ವಾಧೀನ ಅಧಿನಿಯಮ 1894 ರಡಿಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಭೂಸ್ವಾಧೀನ ಪ್ರಕರಣಗಳಲ್ಲಿ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸುವ ಮುನ್ನ, ಭೂ ಕೋರಿಕೆ ಸಂಸ್ಥೆಗಳು ಭೂ ಸ್ವಾಧೀನದ ಅಂದಾಜು ವೆಚ್ಚವನ್ನು ಮುಂಗಡವಾಗಿ ಠೇವಣಿ ಮಾಡಬೇಕೆಂದು ಉಲ್ಲೇಖಿತ (1)ರ ಸುತ್ತೋಲೆಯಲ್ಲಿ ಸರ್ಕಾರವು ಸೂಚನೆಗಳನ್ನು ನೀಡಿದೆ. ಸರ್ಕಾರಿ ಸ್ವಾಮ್ಯದ ಕಾವೇರಿ ನೀರಾವರಿ ನಿಗಮ ನಿಯಮಿತ, ಈ ಸಂಸ್ಥೆಯು ಅನುಷ್ಠಾನಗೊಳಿಸುತ್ತಿರುವ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ, ಭೂಸ್ವಾಧೀನ ಪ್ರಕರಣಗಳನ್ನು ಆರಂಭಿಕ ಠೇವಣಿ ಇಲ್ಲದೆಯೇ ಪ್ರಾರಂಭಿಸಲು ಸರ್ಕಾರವು ಉಲ್ಲೇಖಿತ (2) ರಿಂದ (9)ರ ಸುತ್ತೋಲೆಗಳಲ್ಲಿ ದಿನಾಂಕ:31-03-2013ರ ವರೆಗೆ ವಿನಾಯ್ತಿ ನೀಡಿದೆ. ಈ ಅವಧಿಯು ಈಗಾಗಲೇ ಮುಗಿದಿರುವುದರಿಂದ ಈ ವಿನಾಯ್ತಿಯನ್ನು ವಿಸ್ತರಿಸುವಂತೆ ಉಲ್ಲೇಖ (10)ರ ಪತ್ರದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದರು.

ಆದುದರಿಂದ ಕಾವೇರಿ ನೀರಾವರಿ ನಿಗಮ ನಿಯಮಿತವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕರಣಗಳನ್ನು ಆರಂಭಿಕ ಠೇವಣಿ ಇಲ್ಲದೆಯೆ ಪ್ರಾರಂಭಿಸಲು ಉಲ್ಲೇಖಿತ (1)ರ ಸುತ್ತೋಲೆಯ ಕಂಡಿಕೆ 5ರ (ಅ)ರಲ್ಲಿನ ಷರತ್ತನ್ನು ಸಡಿಲಿಸಿ ದಿನಾಂಕ:01-04-2013 ರಿಂದ ಒಂದು ವರ್ಷದ ಅವಧಿಗೆ ದಿನಾಂಕ: 31-03-2014 ರ ವರೆಗೆ ವಿನಾಯಿತಿಯನ್ನು ವಿಸ್ತರಿಸಿದೆ.

(ಶಂಕರಗೌಡ ಸಿ. ದೊಡ್ಡಮನಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ 1 & 3)